ಓ.ಎಸ್. ನಂ. 180/2014

ಪಿ.ಡಬ್ಲ್ಯು: 01 (ಕೆಂಚನಗೌಡ)

ದಿನಾಂಕ: 01.08.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು: ಪ್ರತಿವಾದಿ ಪರ – ಶ್ರೀ ಬಿ ಎನ್ ಆರ್ ವಕೀಲರಿಂದ.

ಗುರುಸಿದ್ದಮ್ಮಳನ್ನು ಮರಿಯಮ್ಮನಹಳ್ಳಿ ತಾಲೂಕಿಗೆ ಮದುವೆ ಮಾಡಿಕೊಟ್ಟಿದ್ದು, ಅವರು ಅಲ್ಲೇ ಸಾಯುವವರೆಗೆ ವಾಸಿಸುತ್ತಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಮಂಗನಹಳ್ಳಿಯಲ್ಲಿ ವಾಸಿಸುತ್ತಿದ್ದರು. ಅವರಿಗೆ ಮದುವೆಯಾಗಿರುವ ವಿಚಾರ ನನಗೆ ಗೊತ್ತಿಲ್ಲ. ಅವರಿಗೆ ಮಕ್ಕಳಾಗಿದ್ದವೋ ಇಲ್ಲವೋ ನನಗೆ ಗೊತ್ತಿಲ್ಲ. ಆಕೆಗೆ ಅಣ್ಣ ಇದ್ದು, ಆತನ ಹೆಸರು ಸಿದ್ದಲಿಂಗಪ್ಪ.

ಗುರುಸಿದ್ದಮ್ಮ ಮಂಗನಹಳ್ಳಿಯಲ್ಲಿ ವಾಸಿಸುತ್ತಿದ್ದರು ಎಂಬ ಬಗ್ಗೆ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿಲ್ಲ ಎಂದರೆ ಹೌದು. ಗುರುಸಿದ್ದಮ್ಮ ಎಂದಿಗೂ ಉಪನೊಂದಣಾಧಿಕಾರಿ ಕಚೇರಿಗೆ ಬಂದಿರುವುದಿಲ್ಲ ಎಂದರೆ ಹೌದು. ನಾನು ಆ ದಿನ ಗುರುಸಿದ್ದಮ್ಮ ಎಂಬ ಹೆಸರಿನ ಮತ್ತೊಬ್ಬ ಮಹಿಳೆಯನ್ನು ಕರೆದುಕೊಂಡು ಬಂದಿದ್ದೆ ಎಂದರೆ ಸರಿಯಲ್ಲ. ಆಕೆಯೇ ಬಂದಿದ್ದಳು. ದಾನಪತ್ರವನ್ನು ಗುರುಸಿದ್ದಮ್ಮ ಅವರಿಂದ ಬರೆಸಿಕೊಂಡಿರುವುದಿಲ್ಲ, ಆದರೆ ಗುರುಸಿದ್ದಮ್ಮಳ ಹೆಸರಿನಲ್ಲಿ ಬಂದಿದ್ದ ಮತ್ತೊಬ್ಬ ಮಹಿಳೆಯಿಂದ ಬರೆಸಿದ್ದೇವೆ ಎಂದರೆ ಆಕೆಯೇ ಬಂದಿದ್ದಳು. ಸದರಿ ದಾನಪತ್ರಕ್ಕೆ ನಾವು ಸುಳ್ಳು ಸಾಕ್ಷಿದಾರರನ್ನು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಗುರುಸಿದ್ದಮ್ಮಳಿಗೆ ಮಕ್ಕಳಿಲ್ಲದ ಕಾರಣ ಈ ದಾನಪತ್ರವನ್ನು ನಾನು ಮತ್ತು ಗುರುಸಿದ್ದಮ್ಮಳ ಹೆಸರಿನಲ್ಲಿ ಬಂದಿದ್ದ ಮತ್ತೊಬ್ಬ ಮಹಿಳೆಯನ್ನು ಹಾಗೂ ಸಾಕ್ಷಿದಾರರನ್ನು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ.

ಗುರುಸಿದ್ದಮ್ಮ ಸ್ವಯಂ ಪ್ರೇರಿತವಾಗಿ ನನಗೆ ದಾನಪತ್ರವನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಅದನ್ನು ಗುರುಸಿದ್ದಮ್ಮಳಿಂದ ಕಾನೂನು ಪ್ರಕಾರವಾಗಿ ಸ್ವೀಕರಿಸಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಪ್ರಕಾರ ಗುರುಸಿದ್ದಮ್ಮ ಉಪನೊಂದಣಾಧಿಕಾರಿ ಕಚೇರಿಯಲ್ಲಿ ಯಾವ ದಾಖಲಾತಿಗಳನ್ನು ನೀಡಿದ್ದರು ಎಂದರೆ ಆಸ್ತಿಗಳನ್ನು ನೀಡಿದ್ದರು. ಸಾಕ್ಷಿ ಮುಂದುವರೆದು ಗುರುತಿನ ಚೀಟಿಯನ್ನು ನೀಡಿದ್ದರು. ಆಕೆ ಹಾಜರುಪಡಿಸಿದ ದಾಖಲಾತಿಗಳನ್ನು ನಾನು ಉಪನೊಂದಣಾಧಿಕಾರಿ ಕಚೇರಿಯಿಂದ ಪಡೆದು ಹಾಜರುಪಡಿಸಬಲ್ಲೆ.

ಗುರುಸಿದ್ದಮ್ಮಳಿಗೆ ಸಂಬಂಧಸಿದ ವೈಯಕ್ತಿಕ ದಾಖಲಾತಿಗಳನ್ನು ಉಪನೊಂದಣಾಧಿಕಾರಿ ಕಚೇರಿಗೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಸುಳ್ಳು ಸೃಷ್ಟಿ ಮಾಡಿರುವ ದಾನಪತ್ರದ ಆಧಾರದ ಮೇರೆಗೆ ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಈಗ ನನಗೆ ಸರ್ವೆ ನಂಬರ್ 699, 805/ಎಬಿ, 747/ಎ, 748/ಎ ರ ನೋಡಿಸುತ್ತಿದ್ದು ಅದನ್ನು ನ್ಯಾಯಾಲಯಕ್ಕೆ ಸಲ್ಲಿಸಲು ನನಗೆ ತಕರಾರು ಇರುವುದಿಲ್ಲ ಎಂದರೆ ಇಲ್ಲ.

ಓ.ಎಸ್. ನಂ. 180/2014

ಪಿ.ಡಬ್ಲ್ಯು: 01 (ಕೆಂಚನಗೌಡ)

(ಸದರಿ ದಾಖಲಾತಿಗಳ ವಿವರ ಸಾಕ್ಷಿಗೆ ಹೇಳಿರುವುದಿಲ್ಲ ಹಾಗೂ ಸಾಕ್ಷಿ ಅದರ ಅಂಶಗಳನ್ನು ಒಪ್ಪಿರುವುದಿಲ್ಲ ಹಾಗೂ ಆ ರೀತಿ ಪ್ರಶ್ನೆಯನ್ನು ಅವರಿಗೆ ಕೇಳಿರುವುದಿಲ್ಲ, ಆ ಕಾರಣ ಸದರಿ ದಾಖಲಾತಿಗಳನ್ನು ಗುರುತಿಸಿರುವುದಿಲ್ಲ)

ಪಾಟೀ ಸವಾಲು ಮುಕ್ತಾಯ.

ಮರು ವಿಚಾರಣೆ ಇಲ್ಲ.

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ., ಕೂಡ್ಲಿಗಿ.